'ನಿನಗೆ ಅಣ್ಣನ ಮೇಲೆ ಪ್ರೀತಿ ಜಾಸ್ತಿ. ಅವನಿಗೆ ಮಾತ್ರ ಬೈಕು ಕೊಡಿಸಿದ್ದೀಯ. ನಾನು ಯಾವಾಗಲೂ ಅವನನ್ನೇ ಕಾಯಬೇಕು.' ಕಾಯಿ ತುರಿಯೋ ಸದ್ದು. 'ನನಗೆ ಅಂತ ಒಂದು ಅಸ್ತಿತ್ವವೇ ಇಲ್ಲ ಅನ್ನೋತರ ಮಾಡ್ತೀಯ.'

'ಕಾಯಿ ತುರಿದಾಯ್ತು. ತಂದು ಕೊಡು ಇಲ್ಲಿ' ಇವಳ ಧ್ವನಿ ಏರಿತ್ತು.

'ಒಂದು ಕಣ್ಣಿಗೆ ಬೆಣ್ಣೆ... ಒಂದು ಕಣ್ಣಿಗೆ...' ಮಗಳ ಮಾತು ಮುಗಿಯುವ ಮೊದಲೇ ಇವಳ ಧ್ವನಿ ಅಪ್ಪಳಿಸಿತ್ತು 'ಹಲ್ಲೆಲ್ಲ ಉದುರಿಸಿ ಬಿಡ್ತೀನಿ ಇನ್ನೊಂದು ಸಲ ಅವನ ಸುದ್ದಿಗೆ ಹೋದ್ರೆ. ಅವನಿಗೆ ಯಾಕೆ ಕೊಡಿಸ್ದೆ ಅಂತ ನಿನ್ನ ಅನುಮತಿ ಪಡೆಯಬೇಕೇನು? ನಿನಗೆ ಯಾಕೆ ಕೊಡಿಸ್ಲಿಲ್ಲ ಅಂತ ಕೇಳು. ಅದು ಸರಿ. ಈಗ ದುಡ್ಡಿಲ್ಲ. ಇನ್ನೊಂದು ವರುಷ ಓದು. ಆಮೇಲೆ ನಿನ್ನ ಸಂಪಾದನೇಲಿ ಏನು ಬೇಕೋ ಮಾಡಿಕೋ ಅಷ್ಟೆ' ಕಡ್ಡಿಮುರಿದಂತೆ ಉತ್ತರ. ಅಷ್ಟರಲ್ಲೇ ಅವನ ಧ್ವನಿ ಕೇಳಿತು 'ನನಗೆ ಅಂತ ಈ ಜೀವನದಲ್ಲಿ ಸಿಕ್ಕಿರೋದು ಅದೊಂದು ಲಡಕಾಸಿ ಸೆಕೆಂಡ್ ಹ್ಯಾಂಡ್ ಬೈಕು. ನಿನಗೆ ಅದರ ಮೇಲೂ ಕಣ್ಣಾ! ಯಾವ ಜನ್ಮದ ಶತ್ರುನೇ ನೀನು.'

'ಸೆಕೆಂಡ್ ಹ್ಯಾಂಡೋ ಥರ್ಡ್ ಹ್ಯಾಂಡೋ... ಜುಮ್ಮಂತ ಹೋಗ್ತೀಯ... ಸುಮ್ನೆ ಹೇಳ್ಕೊಳ್ಳೋದು ಅಷ್ಟೆ' ಮಗಳ ವ್ಯಂಗ್ಯ.

'ಜುಮ್ಮಂತೆ ಜುಮ್ಮ... ನನ್ನ ಕ್ಲಾಸ್ ಮುಗಿದಿದ್ರೂ ನಿನಗೋಸ್ಕರ ಕಾದು ಕರಕೊಂಡು ಬರಬೇಕು. ಕ್ಲಾಸ್ ಇಲ್ಲದಿದ್ರೂ ನಿನಗೋಸ್ಕರ ಬೇಗ ಹೊರಡಬೇಕು...' ಅವನು ಚುಚ್ಚಿದ.

'ಹೌದು. ಅದು ನಿನ್ನ ಕರ್ತವ್ಯ... ಬೈಕು ತೊಗೊಂಡ ಮೇಲೆ ಕೆಲಸ ಮಾಡಬೇಕು...' ರಾಣಿಯಂತೆ ಮಗಳು ಧಿಮಾಕು ತೋರಿಸಿದಳು.

'ಹೌದು ಹೌದು... ಎಲ್ಲಾ ನನ್ನ ಪ್ರಾರಬ್ಧ. ನನ್ನ ಫ್ರೆಂಡ್ಸ್ ಎಲ್ಲಾ ಅವರ ಗರ್ಲ್ ಫ್ರೆಂಡ್ಸ್‌ನ ಕೂರಿಸಿಕೊಂಡು ಜುಮ್ಮಂತ ಹೋಗ್ತಾರೆ. ನನ್ನ ಹಣೇ ಬರಹಕ್ಕೆ ನಿನಗೇ ಕಾಯಬೇಕು ನಾನು. ಅಮ್ಮ ಅವಳಿಗೊಂದು ಸ್ಕೂಟಿ ಕೊಡಿಸಿಬಿಡಮ್ಮ... ನನ್ನ ಕಷ್ಟನಾದ್ರೂ ತಪ್ಪುತ್ತೆ.'

'ನಿಂದಲ್ಲ ಕಣೋ ನನ್ನ ಹಣೇ ಬರಹ. ನಿನ್ನ ಜೊತೇಲೇ ಬರಬೇಕು ಜೈಲರ್ ಹಿಂದೆ ಹೋಗೋ ಕೈದಿ ತರಹ. ನೀನಾದ್ರೇ ಗರ್ಲ್‌ಫ್ರೆಂಡ್ ಜೊತೆ ಸುತ್ತಬಹುದು. ನಾನಾದ್ರೆ ಯಾರ ಹಿಂದೇನೂ ಹೋಗೋ ಹಾಗಿಲ್ಲ ಅಲ್ವ? ಯಾಕಂದ್ರೆ ನಾನು ಹೆಣ್ಣು. ಯಾಕಾದ್ರೂ ಈ ದೇಶದಲ್ಲಿ ಹೆಣ್ಣಾಗಿ ಹುಟ್ಟಿದೆನೋ. ಗಂಡಾಗಿದ್ರೆ ಚೆನ್ನಾಗಿರ್ತಿತ್ತು...' ಕಾಲು ನೆಲಕ್ಕಪ್ಪಳಿಸಿ ಹೇಳುತ್ತಿದ್ದಾಳೆ.

ಸುಂದರಂಗೆ ಇವಳೇನು ಹೇಳುತ್ತಾಳೋ ಎಂದು ಕುತೂಹಲ. ಒಳಗೆ ತಟ್ಟೆ ಲೋಟಗಳನ್ನು ಜೋಡಿಸಿ ಇಡುತ್ತಿರುವ ಸದ್ದು, ಒಗ್ಗರಣೆಯ ಸದ್ದು ಎಲ್ಲಾ ಕೇಳುತ್ತಿದೆ... ಅಷ್ಟರಲ್ಲಿ ಅವಳ ಧ್ವನಿ–

'ಪೃಥ್ವಿ, ಪೂಜಾ... ದಿನಾ ಹೀಗೇ ಜಗಳ ಆಡ್ತೀರ್ತೀರೋ ಅಥವಾ ಕೆಲಸ ಮುಗಿಸಿ ಓದು ಬರಹ ನೋಡ್ತೀರೋ' ಏರಿಳಿತವಿಲ್ಲದ ಧ್ವನಿ.

ಅಂದರೆ, ಅವನಿಗೆ ಅನ್ನಿಸಿತು, ದಿನಾ ಇಂತಹುದೆಲ್ಲ ನಡೆಯುತ್ತಿರಬಹುದು. ತನ್ನ ಗಮನಕ್ಕೆ ಬಂದೇ ಇಲ್ಲ. ತಾನು ಬೆಳಿಗ್ಗೆ 7 ಗಂಟೆಗೆ ಹೋದರೆ ಬರುವುದು ಸಾಯಂಕಾಲ 8 ಗಂಟೆ ಆಗಿಬಿಡುತ್ತೆ. ಈ ವೆಹಿಕಲ್ ವಿಚಾರ ತನ್ನ ಮನಸ್ಸಿಗೆ ಅಷ್ಟು ಕಾಡಿಯೇ ಇಲ್ಲವಲ್ಲ!!... ಏಕೆಂದರೆ ಸುಂದರ್‌ನ ಅರ್ಥಮಂತ್ರಿಯಾಗಿ ಸುಮತಿ ಸೇರಿಕೊಂಡ ಮೇಲೆ ಈ 24 ವರುಷದಲ್ಲಿ ಎಲ್ಲವನ್ನೂ ಅವಳು ಹೇಗೆಹೇಗೆ ನಡೆಸುತ್ತಿದ್ದಾಳೋ ಅದೆಲ್ಲ ಅವಳಿಗೆ ಮಾತ್ರ ಗೊತ್ತು. ಅವನಿಗಿಷ್ಟು ಪಾಕೆಟ್‌ಮನಿ ಕೊಟ್ಟರೆ ಸಾಕು. ಉಳಿದದ್ದು ಅವಳದೇ ಉಸಾಬರಿ. ಇವತ್ತು ಇದನ್ನೆಲ್ಲ ಕೇಳುತ್ತ ಅವನ ಸಂತೋಷವೆಲ್ಲ ಜರ್ರೆಂದು ಇಳಿದುಬಿಟ್ಟಿತು. ಕೋಪ ಉಕ್ಕಿ ಬರತೊಡಗಿತು. ಏನಂತ